ಅಲ್ಲೇ ನಿಂತೆನು. ಹಿಂದಿರುಗಿ ಬಂದಾಗ ಅವ್ವ ಏನನ್ನೋ ಗುನುಗಿಕೊಳ್ಳುತ್ತಾ ಬಂದಳು. ಅದೇ ದಿನ ಬಂದ ಸಿದ್ಧಣ್ಣನ ಬಳಿಯೂ ಗುಸುಗುಸು ಪಿಸಪಿಸ ಅಂತ ಒಂದಿಷ್ಟು ಬಡಬಡಿಸಿದಳು. ಅವ್ವನ ಉದ್ವೇಗದ ಮಾತುಗಳನ್ನು ನೋಡುತ್ತಿದ್ದ ನನಗೆ 'ಏನೋ ಸಮಸ್ಯೆ ಆಗಿರಬೇಕು' ಅನಿಸುತ್ತಿತ್ತು. 'ಏನು ಮಾಡೋದು, ಕೈಕಾಲೇ ಓಡ್ತಿಲ್ಲ' ಎಂದು ಸಿದ್ಧಣ್ಣ ಅವ್ವನನ್ನು ಕೇಳುತ್ತಿದ್ದನು. ನಂಗೇನೂ ಗೊತ್ತಾಗ್ತಿಲ್ಲ... ಒಟ್ನಲ್ಲಿ ಕಮಲಕ್ಕ ನೋಯ್ಬಾರ್ದು ಅಷ್ಟೇ ಕಣಪ್ಪ' ಅಂತ ಅವ್ವ ಕಣ್ಣೀರಾಕುತ್ತಾ ಹೇಳಿದಳು. ಗೋಡೆಗೆ ಬೆನ್ನಾಕಿ ಮುಂದಿದ್ದ ಕಾಲಿನ ಮೇಲೆ ಬೆಕ್ಕನ್ನು ಆಡಿಸುತ್ತಿದ್ದ ನನಗೆ ಇದೆಲ್ಲ ಕಿವಿಯ ಮೇಲೆ ಬೀಳುತ್ತಿತ್ತು. ಮೋಟುಗೋಡೆಯ ಮೇಲೆ ಇದ್ದ ಲೈಟು ಅತ್ತಿತ್ತ ಬೆಳಕನ್ನು ಚೆಲ್ಲುತ್ತಿತ್ತು. ಬೆಕ್ಕು ಒಮ್ಮೊಮ್ಮೆ ಮಿಯಾಂವ್ ಎಂದು ಮತ್ತೊಮ್ಮೆ ತಪ್ಪಿಸಿಕೊಂಡು ಹೋಗಲು ಶಕ್ತಿಯನ್ನು ಕೊಟ್ಟು ಕಾಲನ್ನು ಎಳೆಯುತ್ತಿತ್ತು. ಅಣ್ಣ ಬರುವ ಹೊತ್ತಾದ್ದರಿಂದ ಇಬ್ಬರೂ ನಾಳೆ ಮಾತನಾಡುವ ಎಂದು ಹೇಳಿ ದೂರಾದರು.

ಅಣ್ಣ ರಾಮನಗರದ ಹಾಸ್ಟೆಲಿನಲ್ಲಿ ಓದುತ್ತಿದ್ದುದರಿಂದ ವಾರಕ್ಕೊಮ್ಮೆ ಬರುತ್ತಿದ್ದನು. ಬಂದವನು ಮನೆಯಲ್ಲಿ ಇರುತ್ತಿರಲಿಲ್ಲ. ಊರಲ್ಲೇ ಹೆಚ್ಚು ಕಾಲ ಕಳೆಯುತ್ತಿದ್ದನು. ಹೀಗೆ ಕಳೆಯುತ್ತಿದ್ದುದರಿಂದ ಊರ ಉಸಾಬರಿಯ ಎಲ್ಲ ಸಂಗತಿಗಳೂ ಅವನಿಗೆ ತಿಳಿದಿರುತ್ತಿದ್ದವು. ಇದರಿಂದಾಗಿಯೇ ಅವ್ವನಿಗೆ ಅವನು ಮೊನ್ನೆ ಮೊನ್ನೆ ಬಯ್ದಿದ್ದು. 'ಯಾರಾದ್ರು ಮನೆಗೆ ಬಂದ್ರೆ ಇನ್ಮೇಲೆ ಬರ್ಬೇಡಿ ಅಂತೇಳು' ಎಂದು ನನಗೂ ಹೇಳುತ್ತಿದ್ದನು. ಆದರೆ, ನಾನು ಯಾರಿಗೂ ಹಾಗೆ ಹೇಳಲು ಆಗುತ್ತಿರಲಿಲ್ಲ. ಸಿದ್ಧಣ್ಣನನ್ನು ಬಿಟ್ರೆ ಮತ್ಯಾರೂ ಅಷ್ಟಾಗಿ ಬರುತ್ತಲೂ ಇರಲಿಲ್ಲ.

ಆ ದಿನ ಶನಿವಾರವಾದ್ದರಿಂದ ಅವ್ವ ಸಂತೆಗೆ ನನ್ನನ್ನೂ ಕರೆದುಕೊಂಡು ಹೊರಟಳು. ಸಂತೆಯ ಹತ್ತಾರು ಗದ್ದಲಗಳ ನಡುವೆ ಬೆಲ್ಲದಂಗಡಿ ಪಕ್ಕ ನಿಂತಿದ್ದ ಕಮಲಕ್ಕ ಮತ್ತು ಸಿದ್ಧಣ್ಣ ಕಂಡರು. ಅವ್ವ ಬೇಗನೆ ಸಾಮಾನುಗಳನ್ನು ತೆಗೆದುಕೊಂಡು ನನ್ನನ್ನೂ ಕರೆದುಕೊಂಡು ಅವರ ಜೊತೆಗೂಡಿದಳು. ಸಿದ್ಧಣ್ಣ ನನ್ನನ್ನು ನೋಡಿದ ಕೂಡಲೇ ಕೈಯಲ್ಲಿದ್ದ ಹಸಿರು ಬಟಾಣಿ ಕಾಳುಗಳನ್ನು ನನ್ನ ಕೈತುಂಬಾ ತುಂಬಿದನು. ನಾನು ಮೆಲ್ಲಲು ಶುರುಮಾಡಿದೆ. ಅಲ್ಲೇ ಪಕ್ಕದಲ್ಲಿ ಮಲ್ಲಿಗೆ ಹೂ ಮಾರುವ ಪೆಟ್ಟಿಯಂಗಡಿಯಿತ್ತು. ಅದರ ಹಿಂಭಾಗಕ್ಕೆ ಎಲ್ಲರೂ ನಡೆದೆವು. ಅಲ್ಲಿ ಕಮಲಕ್ಕ ಅಳುತ್ತಾ, 'ನಂಗೆ ಏನೂ ತಿಳಿವಲ್ದು, ಊರವರೆಲ್ಲ ಒಂತರಾ ಮಾತಾಡ್ತಾರೆ, ನಂಗೆ ನೀನಂದ್ರೆ ಕಳೆದುಹೋದ ಆಸರೆಯೊಂದು ಸಿಕ್ದಂಗೆ ಅನಿಸ್ತದೆ, ನೀನೆಲ್ಲಿದ್ದೋ, ಹೆಂಗೆ ಬಂದೋ ಒಂದೂ ಗೊತ್ತಿಲ್ಲ, ಬಂದವನೇ ದೂರ ಹೋಗ್ದಂಗೆ ನಿಂತ್ಬುಟ್ಟೆ, ನಾನೂ ಹಚ್ಕೊಂಡೆ, ಊರವರೆಲ್ಲ ಒಂತರಾ ಸಂಬಂಧಕಟ್ಟಿ ಮಾತಾಡ್ತಾರೆ, ಎಲ್ಲಾ ಹೋಗ್ಲಿ ನಿನ್ನಿಂದ ದೂರ ಇರೋಣ ಅಂದ್ರೆ ಅದೂ ಆಗಲ್ತು' ಎಂದು ಗೋಗರೆದಳು. 'ನಂಗೂ ಏನಾದ್ರು ಇಂತದ್ದೇ ಮಾಡಬೇಕು ಅನ್ನೋ ಐಡಿಯಾನೇ ಬತ್ತಿಲ್ಲ' ಎಂದು ಹೇಳಿ ಸ್ವಲ್ಪ ಹೊತ್ತು ಏನನ್ನೋ ಯೋಚಿಸಿ ನಂತರ 'ಊರವ್ರ ಬಾಯಿ ಮುಚ್ಚಿಸೋದು ಹೆಂಗೆ ಅಂತ ನಂಗೊತ್ತು, ಅದೇನಾಯ್ತದೋ ನಾನೂ ನೋಡ್ತೀನಿ, ನೀನೂ ಏನೂ ಯೋಚಿಸ್ಬೇಡ' ಎಂದನು. 'ಗಂಡಸ್ರಿಗೆ ಎಲ್ಲಿ ಗೊತ್ತಾಯ್ತದೆ ಗೌರಿಯರ್ರ ದುಕ್ಕ' ಎಂದು ಹೇಳಿ ಕಣ್ಣ ಒರೆಸಿಕೊಂಡು, 'ಊರಾಗೆ ಏನೇನೋ ಮಾತಾಡಿ ನನ್ ತಲೆ ಕೆಡಿಸ್ಬುಡ್ತರೆ' ಎಂದು ಅಳು ನುಂಗಿಕೊಂಡಳು. 'ಸರಿ ನಂಗೆ ಒಸಿ ಟೈಮ್ ಕೊಡು... ಅಲ್ಲಿವರ್ಗೂ ನಿಂಗೆ ಎಂತದೂ ಆಗ್ದಂಗೆ ನಾನೋಡ್ಕೊತೀನಿ' ಎಂದು ಹೇಳಿ ಊರ ಬಸ್ಸಿಗೆ ಎಲ್ಲರನ್ನೂ ಹತ್ತಿಸಿದನು. ಬಸ್ಸಿನಲ್ಲಿದ್ದ ನನಗೆ ಕಮಲಕ್ಕನ ದುಗುಡದ ಮುಖ ಕಂಡು ಪಿಚ್ಚೆನಿಸಿತು.

ಆ ದಿನ ರಾತ್ರಿ ಎಂದೂ ಕುಡಿಯದಿದ್ದ ಸಿದ್ಧಣ್ಣ ಕುಡಿದನು. ಕೊನೆಯ ಬಸ್ಸಿಗೆ ಊರಿಗೆ ಬಂದು ಒಕ್ಕಲಗೇರಿಗೆ ನುಗ್ಗಿ, 'ಯಾವನಾರ ನನ್ ಸುದ್ದಿ ಮಾತಾಡುದ್ರೆ ಹುಟ್ಲಿಲ್ಲ ಅನುಸುಬುಡ್ತೀನಿ, ಮುಚ್ಕೊಂಡು ಮನೇಲಿರ್ರೋ... ಊರೋರು ಸುದ್ದಿ ನಿಮಗ್ಯಾಕ್ರಲೇ' ಎಂದು ಅತ್ಯಂತ ಕೆಟ್ಟದಾಗಿ ಬಡಬಡಿಸಿದನು. ಒಳಗೆ ಮಲಗಿದ್ದ ಕಮಲಕ್ಕನಿಗೆ ಜೀವವೇ ಹೋದಂತಾಯಿತಂತೆ. 'ಏನಾದ್ರು ಆಗ್ಲಿ, ನನ್ನೆಸ್ರು ಹೇಳ್ದಿದ್ರೆ ಸಾಕು' ಎಂದುಕೊಂಡು